

بِسۡمِ اللّٰہِ الرَّحۡمٰنِ الرَّحِیۡمِ

# ಅಲ್ಲಾಹನ ಕೋಪಾಗ್ನಿಯಿಂದ ರಕ್ಷಣೆ ಹೊಂದಲು
# ದುಆ, ಇಸ್ತಿಗ್‌ಫಾರ್ ಮತ್ತು ದಾನಧರ್ಮಗಳ ಕಡೆಗೆ ಗಮನ ಹರಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **24-02-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹರ್ಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದಿನ ಕಾಲದ ಲೋಕದ ಸ್ಥಿತಿ ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಎಲ್ಲ ಸ್ಥಳಗಳಲ್ಲಿಯೂ ಗಲಬೆಗೊಂದಲಗಳು ಮತ್ತು ಹಿಂಸಾಚಾರಗಳು ಜಾರಿಯಲ್ಲಿವೆ. ಲೋಕದ ಈ ಪರಿಸ್ಥಿತಿಗೆ ಕಾರಣಕರ್ತರು ಮುಸ್ಲಿಮರಾಗಿದ್ದಾರೆ ಎಂದು ಇಸ್ಲಾಮ್ ವಿರೋಧಿ ಶಕ್ತಿಗಳು ಹೇಳುತ್ತವೆ. ಅದೇ ವೇಳೆ ಕೆಲವು ಮುಸ್ಲಿಮ್ ಗುಂಪುಗಳು ಮತ್ತು ಸಂಘಟನೆಗಳು ಇಸ್ಲಾಮಿನ ಹೆಸರಲ್ಲಿ ಎಂತಹ ಕೃತ್ಯಗಳನ್ನು ಮಾಡುತ್ತಾರೆಂದರೆ ಅವುಗಳಲ್ಲಿ ದೌರ್ಜನ್ಯ ಮತ್ತು ಬರ್ಬರ ಹಿಂಸಾಚಾರದ ಹೊರತು ಬೇರೇನೂ ಇಲ್ಲ ಎಂಬುದು ಸಹ ಸತ್ಯವಾಗಿದೆ. ಇಸ್ಲಾಮಿನ ಉಪದೇಶಗಳಿಗೆ ಈ ಕೃತ್ಯಗಳೊಂದಿಗೆ ದೂರದ ಸಂಬಂಧ ಸಹ ಇರುವುದಿಲ್ಲ. ಆದರೆ ವಾಸ್ತವಿಕ ವಿಷಯವೇನೆಂದರೆ, ಮುಸ್ಲಿಮರೊಳಗೆ ಇಂತಹ ಸ್ಥಿತಿ ಉಂಟುಮಾಡಲು ಯೋಜನಾಬದ್ಧವಾಗಿ ಪ್ರಯತ್ನಿಸಲಾಗಿದೆ ಮತ್ತು ಈ ಪ್ರಯತ್ನ ಮುಂದುರಿಸಲಾಗುತ್ತಿದೆ. ಇಸ್ಲಾಮಿಗೆ ಹಾನಿಯನ್ನು ಸ್ವಾರ್ಥಿಗಳಾದ ಮುಸ್ಲಿಮರು ಮತ್ತು ಕಪಟ ವಿಶ್ವಾಸಿಗಳೇ ಹೆಚ್ಚಾಗಿ ಉಂಟುಮಾಡಿದ್ದಾರೆ. ಅವರು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಇಂತಹ ಮುಸ್ಲಿಮ್ ವಿರೋಧಿ ಶಕ್ತಿಗಳಿಗೆ ಉಪಕರಣಗಳಾಗುತ್ತಾ ಇದ್ದಾರೆ. ಒಟ್ಟಾರೆ ಹೇಳುವುದಾದರೆ ಲೋಕದ ಸಾಮಾನ್ಯ ಸ್ಥಿತಿ ಈಗ ಬಹಳಷ್ಟು ಕೆಟ್ಟು ಹೋಗಿದೆ. ಕೆಲವು ಮುಸ್ಲಿಮರು ಮಾಡುವ ತಪ್ಪು ಕೃತ್ಯಗಳ ಕಾರಣ ಇಸ್ಲಾಮ್ ವಿರೋಧಿ ಶಕ್ತಿಗಳಿಗೆ ಇಸ್ಲಾಮನ್ನು ಅಪಕೀರ್ತಿಗೊಳಪಡಿಸಲು ಧಾರಾಳ ಸಂದರ್ಭಗಳು ಲಭಿಸುತ್ತವೆ. ಈ ಕಾರಣದಿಂದ ಅಹ್ಮದಿ ಮುಸ್ಲಿಮರಾದ ನಾವು ಸಹ ಅವರ ಆಕ್ಷೇಪಗಳಿಗೆ ಗುರಿಯಾಗುತ್ತಿದ್ದೇವೆ. ಆದರೆ ನಮ್ಮ ಬಗ್ಗೆ ಪರಿಚಯಗಳಿಸಿದವರಿಗೆ ತಿಳಿದಿದೆ ಅಹ್ಮದಿಯ್ಯತ್ತಿನ ತತ್ವಗಳು ಮತ್ತು ಕೃತ್ಯಗಳು ಪ್ರೀತಿ, ಸೌಹಾರ್ದ ಮತ್ತು ಭ್ರಾತೃತ್ವದ ಹೊರತು ಇನ್ನೇನೂ ಅಲ್ಲವೆಂದು. ಆದರೆ ಸಾಮಾನ್ಯ ಜನರು ನಮ್ಮ ಬಗ್ಗೆ ಯೋಚಿಸುವುದು, ಮಾಧ್ಯಮಗಳು ಮುಸ್ಲಿಮರ ಬಗ್ಗೆ ಮತ್ತು ಇಸ್ಲಾಮಿನ ಕುರಿತು ಹರಡುವ ಚಿತ್ರಣಗಳ ಪ್ರಕಾರವಾಗಿದೆ. ಕೆಲವು ದೇಶಗಳ ರಾಷ್ಟ್ರೀಯವಾದಿ ಸಂಘಟನೆಗಳು ಮತ್ತು ಪಕ್ಷಗಳು ಇತರ ಯಾವುದೇ ಮಾತನ್ನು ಆಲಿಸಲು ಸಿದ್ಧರಾಗಿರುವುದಿಲ್ಲ. ಅವರು ನಕಾರಾತ್ಮಕ ನಿಲುವನ್ನು ಮತ್ತು ಯೋಚನೆಗಳನ್ನು ಹೊಂದಿ ಅವುಗಳ ಪ್ರಕಾರ ವರ್ತಿಸುವ ಬಗ್ಗೆಯೇ ಆಗ್ರಹ ಹೊಂದಿದ್ದಾರೆ. ಈ ರೀತಿಯ ವಿರೋಧವು ಜರ್ಮನಿಯ ಪೂರ್ವಭಾಗದಲ್ಲಿ ಹಾಗೂ ಚುನಾವಣೆ ಹತ್ತಿರ ಬರುತ್ತಿರುವ ಹಾಲೆಂಡಿನಲ್ಲಿ ಕಂಡುಬರುತ್ತದೆ. ಇದೇ ರೀತಿ ಯುರೋಪಿನ ಇತರ ದೇಶಗಳಲ್ಲಿಯೂ ಬಲಪಂಥೀಯರು ಈಗ ಪ್ರಬಲರಾಗುತ್ತಿದ್ದಾರೆ. ಅಮೇರಿಕದ ಸ್ಥಿತಿ ನಮ್ಮ ಮುಂದಿದೆ. ಅಹ್ಮದಿಯರು, ಮುಸ್ಲಿಮರಾದ ಕಾರಣ ಈ ದೇಶಗಳಲ್ಲಿ, ಮತ್ತು ಅಹ್ಮದಿಯರಾದ ಕಾರಣ ಮುಸ್ಲಿಮ್ ದೇಶಗಳಲ್ಲಿಯೂ ಕಠಿಣ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ. ಅಲ್ಲಾಹನ ವಾಗ್ದಾನ ಪ್ರಕಾರ ಆಗಮಿಸಿದ ಮಹಾನುಭಾವರನ್ನು ನಾವು ನಂಬಿದ ಕಾರಣದಿಂದ ಹೀಗೆ ಆಗುತ್ತಿದೆ. ಪಾಕಿಸ್ಥಾನದಲ್ಲಂತೂ ದೌರ್ಜನ್ಯಕರ ನಿಯಮಗಳ ಕಾರಣದಿಂದ ಮೌಲವಿಗಳಿಗೆ ತಮ್ಮ ಇಷ್ಟಪ್ರಕಾರ ವರ್ತಿಸಲು ಸ್ವಾತಂತ್ರ್ಯವಿದೆ. ಮೌಲವಿಗಳಿಗೆ ಹೆದರಿ ನ್ಯಾಯಾಲಯಗಳು ಸಹ ನ್ಯಾಯಪಾಲನೆ ಮಾಡದಿರಲು ನಿರ್ಬಂಧಿಸಲ್ಪಟ್ಟಿವೆ. ಈಗ ಅಲ್ಜೀರಿಯಾ ದೇಶದ ನ್ಯಾಯಾಲಯಗಳು ಸಹ ಹೀಗೆಯೇ ವರ್ತಿಸುತ್ತಿವೆ. ಅಲ್ಲಿ ಮೌಲವಿ ನಾಮಧೇಯರಿಗೆ ಹೆದರಿಕೊಂಡು ನಿಷ್ಕಳಂಕ ಅಹ್ಮದಿಯರ ವಿರುದ್ಧ ತಪ್ಪು ದೋಷಾರೋಪ ಹೊರಿಸಿ ಅವರನ್ನು ಸೆರೆಮನೆಗೆ ಹಾಕಲಾಗುತ್ತಿದೆ. 16 ಅಹ್ಮದಿಯರು ಈಗ ಅಲ್ಲಿ ಅಹ್ಮದಿಯ್ಯತ್ತಿನ ಕಾರಣದಿಂದ ಸೆರೆಮನೆಯಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಅಹ್ಮದಿ ಮಾಡಬೇಕಾದುದೇನು? ನಮ್ಮ ಬಳಿ ಲೌಕಿಕ ಆಡಳಿತಗಳಾಗಲಿ ಲೌಕಿಕ ಸಂಪತ್ತಾಗಲಿ ಎಣ್ಣೆಯ ಸಂಪತ್ತಾಗಲಿ ಇಲ್ಲ. ಆದರೆ ನಮ್ಮ ಬಳಿ ಒಂದು ವಸ್ತುವಿದೆ. ಅದರ ಕಡೆಗೆ ಲೋಕದ ಪ್ರತಿಯೊಬ್ಬ ಅಹ್ಮದಿ ಗಮನ ಹರಿಸುವ ಆವಶ್ಯಕತೆ ಇದೆ. ಅದೆಂದರೆ, ಇಬಾದತ್, ಸದಖಾತ್ ಮತ್ತು ಇಸ್ತಿಗ್‌ಫಾರ್ ಮೂಲಕ ಅಲ್ಲಾಹನ ಸಾಮೀಪ್ಯ ಗಳಿಸುವುದಾಗಿದೆ. ಇವುಗಳೇ ಅಲ್ಲಾಹನ ಕಾರುಣ್ಯವನ್ನು ಉತ್ತೇಜಿಸುತ್ತವೆ ಮತ್ತು ಮನುಷ್ಯನು ಅಲ್ಲಾಹನ ಆಶ್ರಯವನ್ನು ಪಡೆಯುತ್ತಾನೆ. ಇವುಗಳು ಅಲ್ಲಾಹನ ಕಾರುಣ್ಯವನ್ನು ಗಳಿಸುವ ಮಾರ್ಗಗಳಾಗಿವೆ. ಮನುಷ್ಯನಲ್ಲಿ ಅಸಂಖ್ಯಾತ ಬಲಹೀನತೆಗಳಿವೆ. ಕೆಲವು ಸಾರಿ ನಾವು ಲೌಕಿಕ ಕೆಲಸಗಳಲ್ಲಿ ಮಗ್ನರಾಗಿರುವಾಗ ನಾವು ಮಾಡಬೇಕಾದ ಆರಾಧನೆಗಳನ್ನು ಸಹ ಮಾಡುವುದಿಲ್ಲ. ಯಾವುದಾದರೂ ವೈಯಕ್ತಿಕ ಸಮಸ್ಯೆ ಎದುರಾದರೆ ಆಗ ಸ್ವಲ್ಪ ದಾನಧರ್ಮ ಮಾಡುವ ಬಗ್ಗೆ ಗಮನ ಹರಿಸುತ್ತೇವೆ. ಇಲ್ಲವಾದರೆ ಇಲ್ಲ. ಅಲ್ಲಾಹನ ಅನುಗ್ರಹಗಳನ್ನು ಗಳಿಸಲು, ಅವನ ಕಾರುಣ್ಯವನ್ನು ಉತ್ತೇಜಿಸುವವರಾಗಲು, ಶತ್ರುಗಳ ಮತ್ತು ವಿರೋಧಿಗಳ ಪ್ರಯತ್ನಗಳನ್ನು ನಿಷ್ಫಲಗೊಳಿಸುವವರಾಗಲು ನಾವು ಈ ವಿಷಯಗಳ ಕಡೆಗೆ ಆವಶ್ಯಕವಾಗಿ ಗಮನ ಹರಿಸಬೇಕಾಗಿದೆ. ಅವು ಅಲ್ಲಾಹನ ಸಂಪ್ರೀತಿ ಮತ್ತು ಅವನ ಕ್ಷಮೆಯನ್ನು ದೊರಕಿಸಿ ಕೊಡುವವುಗಳಾಗಿವೆ. ನಾನು ತೌಬ, ಇಸ್ತಿಗ್‌ಫಾರ್ ಸದಖಗಳನ್ನು ಸ್ವೀಕರಿಸುತ್ತೇನೆ ಎಂದು ಅಲ್ಲಾಹನು ಹೇಳಿರುವುದು ನೀವು ಅದರ ಕಡೆಗೆ ಗಮನ ಹರಿಸಿದರೆ ನಿಮ್ಮ ಕಷ್ಟಗಳನ್ನು ನಾನು ದೂರಸರಿಸಿ ನಿಮಗಿರುವ ಆತಂಕವನ್ನು ನಿವಾರಿಸಿ ನಿಮಗೆ ನನ್ನ ಸಾಮೀಪ್ಯ ನೀಡುವೆನು ಎಂಬ

ಅರ್ಥದಲ್ಲಾಗಿದೆ. ನೀವು ಮಾಡಿದ ಪಾಪಗಳನ್ನು ಕ್ಷಮಿಸಿ ನೀವು ನೈಜ ದೇವದಾಸರಾಗಲು ಭಾಗ್ಯ ನೀಡುವೆನು ಮತ್ತು ನಿಮ್ಮ ಮೇಲೆ ಕಾರುಣ್ಯ ಸುರಿಸುವೆನು ಎಂಬರ್ಥದಲ್ಲಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ಅಲಮ್ ತಲ್‌ಲಮೂ ಅನ್ನಲ್ಲಾಹ ಹುವ ಯಖ್‌ಬಲುತ್ತೌಬತ ಅನ್‌ಇಬಾದಿಹೀ ವಯಅ್‌ಖುಝುಸ್ಸದಖಾತಿ ವಅನ್ನಲ್ಲಾಹ ಹೂವತ್ತವ್ವಾಬುರ್ರಹೀಮ್.**

ಅಲ್ಲಾಹನೇ ತನ್ನ ಭಕ್ತ ಜನರಿಂದ ಪಶ್ಚಾತ್ತಾಪವನ್ನು ಸ್ವೀಕರಿಸುವವನೂ ದಾನಧರ್ಮಗಳನ್ನು ಸ್ವೀಕರಿಸುವವನೂ ಮಾತ್ರವಲ್ಲ ಅಲ್ಲಾಹನೇ ಅತಿ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆಂದು ಅವರಿಗೆ ತಿಳಿದಿಲ್ಲವೇ? (ಪವಿತ್ರ ಖುರ್‌ಆನ್ 9:104)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ಸದಖ** ಎಂಬ ಶಬ್ದ **ಸಿದ್‌ಖ್** ಎಂಬ ಶಬ್ದದಿಂದ ಪಡೆದುದಾಗಿದೆ. ಒಬ್ಬನು ಅಲ್ಲಾಹನ ಮಾರ್ಗದಲ್ಲಿ ಸದಖ(ದಾನಧರ್ಮ) ಕೊಡುವುದಾದರೆ ಅವನು ಅಲ್ಲಾಹನೊಂದಿಗೆ ಸಿದ್‌ಖ್ (ಸತ್ಯದ ಸಂಬಂಧ) ಹೊಂದಿದ್ದಾನೆಂದಾಗುತ್ತದೆ. ಅದೇರೀತಿ ದುಆ ಮಾಡುವಾಗ ಹೃದಯದಲ್ಲಿ ಆರ್ದ್ರತೆ ಉಂಟಾಗುತ್ತದೆ. ದುಆದಲ್ಲಿ ಒಂದು ಬಲಿಯರ್ಪಣೆ ಇದೆ. ಸತ್ಯ ಮತ್ತು ದುಆ ಇವೆರಡು ಲಭಿಸಿದರೆ ಅವು ಶಮನಕಾರಿಗಳಾಗುತ್ತವೆ.

**ಇಸ್ತಿಗ್‌ಫಾರ್** ಸಹ ದುಆ ಆಗಿದೆ. ಮನುಷ್ಯನು ತನ್ನ ಪಾಪಗಳನ್ನೂ ಬಲಹೀನತೆಗಳನ್ನೂ ನಿವೇದಿಸಿ ಪ್ರಾರ್ಥಿಸುವಾಗ ಹೃದಯದಲ್ಲಿ ಆರ್ದ್ರತೆ ಮತ್ತು ಉತ್ಸಾಹ ಉಂಟಾಗುತ್ತದೆ. ಕೇವಲ ಬಾಯಿಯಲ್ಲಿ **ಅಸ್ತಗ್‌ಫಿರುಲ್ಲಾಹ್, ಅಸ್ತಗ್‌ಫಿರುಲ್ಲಾಹ್** ಎಂದು ಹೇಳುತ್ತಾ ತನ್ನ ಶ್ರದ್ಧೆಯನ್ನು ಅಲ್ಲಾಹನ ಕಡೆಗಿರಿಸದೆ ಬೇರೆ ಕಡೆಗಿರಿಸಿದರೆ ಈ ಪ್ರಾರ್ಥನೆಯ ಉದ್ದೇಶ ಈಡೇರಲಾರದು. ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಕಷ್ಟದ ಕಾಲದಲ್ಲಿ ಅಲ್ಲಾಹನ ಕಾರುಣ್ಯವನ್ನು ಗಳಿಸಲು ನೀಡಲಾಗುವ ದಾನಧರ್ಮಗಳನ್ನು ಅಲ್ಲಾಹನು ಸ್ವೀಕರಿಸುತ್ತಾನೆ. ದಾಸನು, ನಾನು ಇನ್ನು ಮುಂದೆ ನನ್ನ ಬಲಹೀನತೆಗಳನ್ನು ನಿವಾರಿಸಲು ಧಾರಾಳ ಪ್ರಯತ್ನ ಮಾಡುವೆನು ಎಂದು ಪ್ರತಿಜ್ಞೆ ಮಾಡಿ ಅಲ್ಲಾಹನ ಕಾರುಣ್ಯಗಳಿಸಲು ಪ್ರಯತ್ನ ಮಾಡುವುದಾದರೆ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ಸಲ್ಲಮರ ಮೂಲಕ ನಮಗೆ ಶುಭವಾರ್ತೆ ಹೀಗೆ ನೀಡಿದ್ದಾನೆ: ಓ ಪ್ರವಾದಿ, ನನ್ನ ದಾಸರಿಗೆ ತಿಳಿಸು, ನನ್ನ ದಾಸ ನನ್ನ ಕಡೆಗೆ ಒಂದು ಹೆಜ್ಜೆ ಚಲಿಸಿದರೆ ನಾನು ಅವನ ಕಡೆಗೆ ಎರಡು ಹೆಜ್ಜೆ ಹಾಕುವೆನು ಎಂದು. ನನ್ನ ದಾಸನು ನನ್ನ ಕಡೆಗೆ ವೇಗವಾಗಿ ನಡೆದು ಬರುವಾಗ ನಾನು ಅವನ ಕಡೆಗೆ ಓಡುತ್ತಾ ಬರುವೆನು.

ಅಲ್ಲಾಹನ ಕಾರುಣ್ಯ ಅಪರಿಮಿತವಾಗಿದೆ. ಯಾವಾಗಲೂ ನೆನಪಿಡಬೇಕಾದುದೇನೆಂದರೆ ಅಲ್ಲಾಹನು ನಮ್ಮ ಹೃದಯದ ಸ್ಥಿತಿಯನ್ನು ಅರಿತುಕೊಂಡಿರುತ್ತಾನೆ. ಆದುದರಿಂದ ನಾವು ತೋರಿಕೆಗಾಗಿ ಮಾಡುವ ನಮ್ಮ ಕೆಲಸಗಳನ್ನು ಅವನು ಅಂಗೀಕರಿಸಲಾರನು. ಅಲ್ಲಾಹನು ಎಷ್ಟು ಅನುಕಂಪಶಾಲಿಯಾಗಿರುವನೆಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾರಿಗಾದರೂ ಸದಖ ನೀಡಲು ಆರ್ಥಿಕ ಶಕ್ತಿ ಇಲ್ಲದಿದ್ದರೆ ಅಂತಹ ವ್ಯಕ್ತಿ ಕೆಟ್ಟ ಕೆಲಸಗಳಿಂದ ತನ್ನನ್ನು ತಡೆದಿರಿಸಿ ಒಳ್ಳೆಯ ಕೆಲಸ ಮಾಡುತ್ತಿದ್ದರೆ ಅದೇ ಅವನು ನೀಡುವ ಸದಖ ಆಗುತ್ತದೆ. ಅದರ ಪುಣ್ಯ ಅವನು ಗಳಿಸುವನು.

ಆದುದರಿಂದ ಕಷ್ಟ ನಿವಾರಣೆಗಿರುವ ಪರಿಹಾರ ಮಾರ್ಗ ಇದೇ ಆಗಿದೆ. ನಾವು ಅಲ್ಲಾಹನನ್ನು ಆರಾಧಿಸುತ್ತಾ ಪ್ರಾರ್ಥಿಸುತ್ತಾ ಅವನ ಮುಂದೆ ಬಾಗಬೇಕು. ಇಸ್ತಿಗ್‌ಫಾರ್ ಧಾರಾಳ ಮಾಡುತ್ತಾ ಇರಬೇಕು. ಸದಖ ಮತ್ತು ದಾನಧರ್ಮಗಳ ಕಡೆಗೆ ಗಮನ ಹರಿಸಬೇಕು. ಇಸ್ತಿಗ್‌ಫಾರ್ ಎಂದರೇನೆಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಪಾಪವೆಂಬುದು ಮನುಷ್ಯನ ರಕ್ತದಲ್ಲಿ ಲೀನವಾಗಿರುವ ಒಂದು ಕೀಟವಾಗಿದೆ. ಇಸ್ತಿಗ್‌ಫಾರ್ ಮೂಲಕವೇ ಅದಕ್ಕೆ ಚಿಕಿತ್ಸೆ ಮಾಡಲು ಸಾಧ್ಯವಿದೆ. ಇಸ್ತಿಗ್‌ಫಾರ್ ಎಂದರೇನು? ಇದರ ಮೊದಲು ಮಾಡಿದ ಪಾಪಕೃತ್ಯದ ದೋಷಫಲಗಳಿಂದ ಅಲ್ಲಾಹನು ರಕ್ಷಿಸಲು ಮತ್ತು ಇಷ್ಟರವರೆಗೆ ಮಾಡದ ಪಾಪಕೃತ್ಯಗಳನ್ನು ಮುಂದೆ ಮಾಡಲು ಶಕ್ತಿ ಇದ್ದರೂ ಅವುಗಳನ್ನು ಮಾಡದಂತಾಗಲು ಅವು ಒಳಗಿಂದೊಳಗೆ ಸುಟ್ಟು ಭಸ್ಮವಾಗಲಿ ಎಂದು ಪ್ರಾರ್ಥಿಸುವುದಾಗಿದೆ. ಇದು ಬಹಳ ಭಯಪಡಬೇಕಾದ ಕಾಲವಾಗಿದೆ. ಆದುದರಿಂದ ಇಸ್ತಿಗ್‌ಫಾರ್ ಮಾಡುತ್ತಾ ಇರಬೇಕು ಮತ್ತು ನೀವು ಆತ್ಮ ಪರಿಶೋಧನೆ ನಡೆಸುತ್ತಾ ಇರಬೇಕು. ದಾನಧರ್ಮಗಳಿಂದ ವಿಪತ್ತು ದೂರ ಸರಿಸಲ್ಪಡುತ್ತದೆ ಎಂದು ಪ್ರತಿಯೊಂದು ಧರ್ಮದ ಮತ್ತು ಜನಾಂಗದ ಜನರು ಹಾಗೂ ಅಹ್ಲೆ ಕಿತಾಬ್ ಜನರು ನಂಬುತ್ತಾರೆ. ಆದರೆ ವಿಪತ್ತು ಬಂದೆರಗುವ ಮೊದಲು ದಾನಧರ್ಮ ನೀಡಬೇಕು. ವಿಪತ್ತು ಬಂದೆರಗಿದನಂತರ ಅದು ಖಂಡಿತವಾಗಿ ದೂರ ಸರಿಸಲ್ಪಡಲಾರದು. ಆದುದರಿಂದ ನೀವು ಈಗಲೇ ಇಸ್ತಿಗ್‌ಫಾರ್ ಮಾಡಿರಿ ಮತ್ತು ತೌಬ ಮಾಡುತ್ತಾ ಇರಿ. ಆ ಮೂಲಕ ಅಲ್ಲಾಹನು ನಿಮ್ಮನ್ನು ಬಂದೆರಗಬಹುದಾದ ವಿಪತ್ತಿನಿಂದ ರಕ್ಷಿಸುವಂತಾಗಲಿ.

ಈಗ ಬಂದಿರುವುದು ಚಿಕ್ಕ ಕಷ್ಟಗಳಾಗಿದೆ. ಆದರೆ ಯಾವ ಕಡೆಗೆ ಲೋಕ ಸಾಗುತ್ತಿದೆ, ಯಾವ ರೀತಿ ಮನುಷ್ಯನು ಹತೋಟಿ ರಹಿತನಾಗುತ್ತಾನೆ, ಯಾವ ರೀತಿ ಅಲ್ಲಾಹನ ಕೋಪ ಬಂದೆರಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ, ಇವುಗಳೆಲ್ಲಾ ಮನುಷ್ಯನು ತನ್ನ ಸ್ವಂತ ಕೈಗಳಿಂದ ನಿರ್ಮಿಸಿದ ವಿನಾಶದ ಕಡೆಗೆ ಮನುಷ್ಯನನ್ನು ಒಯ್ಯುತ್ತಿವೆ. ಈಗ ಲೋಕ ಅಲ್ಲಾಹನ ಸಿಟ್ಟನ್ನು ಉದ್ರೇಕಿಸುತ್ತಿದೆ. ಇಂತಹ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರ ಕೆಲಸವೇನೆಂದರೆ, ನಾವು ನಮ್ಮನ್ನು ಕೆಟ್ಟ ಪರಿಣಾಮಗಳಿಂದ ರಕ್ಷಿಸಲು ತೌಬ ಇಸ್ತಿಗ್‌ಫಾರ್ ಧಾರಾಳವಾಗಿ ಮಾಡಬೇಕಲ್ಲದೆ ಲೋಕದ ಪರವಾಗಿಯೂ ಪ್ರಾರ್ಥನೆ ಮಾಡಬೇಕು. ಅಲ್ಲಾಹನು ಲೋಕದ ಜನರಿಗೆ ಬುದ್ಧಿ ನೀಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜಯಗಳಿಸಲು ದುಆ ಬಹಳ ದೊಡ್ಡ ಆಯುಧವಾಗಿದೆ. ಹಝ್ರತ್ ಯೂನುಸ್ ಅಲೈಹಿಸ್ಸಲಾಮರ ಜನಾಂಗ ಗೋಳಿಟ್ಟು ಅಲ್ಲಾಹನೊಂದಿಗೆ ಬೇಡಿಕೊಂಡ ಕಾರಣ ಅವರ ಮೇಲೆ ಬಂದೆರಗಲಿದ್ದ ವಿಪತ್ತಿನಿಂದ ಅವರು ರಕ್ಷಿಸಲ್ಪಟ್ಟರು. ಇದರಿಂದ ಒಂದು ನೀತಿಪಾಠ ಲಭಿಸುತ್ತದೆ.

ಅಳುತ್ತಾ ಪ್ರಾರ್ಥಿಸುವ ಮೂಲಕ ಮತ್ತು ದಾನಧರ್ಮಗಳನ್ನು ಮಾಡುವ ಮೂಲಕ ದೊಡ್ಡ ದೊಡ್ಡ ಪಾಪಗಳು ಸಹ ನಿವಾರಿಸಲ್ಪಡುತ್ತವೆ. ಸ್ವಪ್ನದ ವ್ಯಾಖ್ಯಾನಶಾಸ್ತ್ರ ಪ್ರಕಾರ ಯಕೃತ್ ಎಂದರೆ ಸಂಪತ್ತು ಆಗಿದೆ. ಆದುದರಿಂದ ದಾನಧರ್ಮ ಮಾಡುವುದು ಜೀವ ಅರ್ಪಿಸುವುದಕ್ಕೆ ಸಮವಾಗಿದೆ. ಮನುಷ್ಯನು ದಾನಧರ್ಮ ಮಾಡುವಾಗ ಸತ್ಯ ಮತ್ತು ಸ್ಥಿರತೆಯನ್ನು ಪ್ರಕಟಿಸುತ್ತಾನೆ. ವಾಸ್ತವಿಕ ವಿಷಯವೇನೆಂದರೆ ಕೇವಲ ಮಾತಿನಿಂದ ಯಾವ ಪ್ರಯೋಜನವೂ ಇಲ್ಲ. ಮಾತನ್ನು ಕೃತ್ಯದ ಮೂಲಕ ಪ್ರಕಟಿಸಬೇಕು. ದಾನಧರ್ಮವನ್ನು ಸದಖ ಎಂದು ಹೇಳಿರುವುದು ಅದು ಸಾದಿಖ್ (ಸತ್ಯಸಂಧ) ಜನರ ಚಿಹ್ನೆಯಾಗಿರುವುದರಿಂದ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಮರಗಳಿಗೆ ಮತ್ತು ಹೊಲಗಳಿಗೆ ಧಾರಾಳ ನೀರು ಹರಿಸದಿದ್ದರೆ ಅವು ಫಲಗಳನ್ನು ನೀಡಲಾರವು. ಅದೇ ರೀತಿ ಒಳಿತುಗಳ ನೀರನ್ನು ಹೃದಯಕ್ಕೆ ನೀಡದಿದ್ದರೆ ಅದು ಸಹ ಮನುಷ್ಯನಿಗೆ ಯಾವ ಪ್ರಯೋಜನವನ್ನೂ ನೀಡಲಾರದು.

ಮನೆಗಳಲ್ಲಿ ಸತ್ಕರ್ಮಗಳ ಬಗ್ಗೆ ಪ್ರಸ್ತಾಪಿಸುತ್ತಾ ಇರಬೇಕು. ಆ ಮೂಲಕ ದುಆಗಳ ಕಡೆಗೆ ಮತ್ತು ಇಸ್ತಿಗ್‌ಫಾರ್ ಮಾಡುವ ಬಗ್ಗೆ ಶ್ರದ್ಧೆ ಉಂಟಾಗುತ್ತಾ ಇರಬೇಕು. ಬೇರೆ ಒಳಿತುಗಳನ್ನು ಮಾಡುವ ಬಗ್ಗೆ ಸಹ ಗಮನ ಹರಿಯುವಂತಾಗಬೇಕು. ಅದು ಒಳಿತಿನ ಗಿಡವನ್ನು ಬೆಳೆಸುವ ನೀರಾಗಿದೆ. ಅದರ ಮೂಲಕ ವಿಶ್ವಾಸ ದೃಢವಾಗುತ್ತದೆ. ಅಲ್ಲಾಹನ ಅನುಗ್ರಹ ಗಳಿಸಲು ಆರಾಧನೆ ಮಾಡುವುದು ಆವಶ್ಯಕವಾಗಿರುವುದರ ಜೊತೆಗೆ ಎಲ್ಲ ವಿಧಗಳ ದೌರ್ಜನ್ಯ ಮತ್ತು ಅತಿಕ್ರಮಗಳಿಂದ ದೂರವಿದ್ದುಕೊಂಡು, ಪರೋಪಕಾರ ಮಾಡುವ ಕಡೆಗೆ ಗಮನ ಹರಿಸುವುದು ಸಹ ಆವಶ್ಯಕವಾಗಿದೆ. ಮನೆಯಲ್ಲಿ ಹೆಚ್ಚು ಸಮಯ ಲೌಕಿಕ ಕಾರ್ಯಗಳಲ್ಲಿ ಮಗ್ನರಾಗದೆ ಒಳಿತಿನ ಮಾತುಗಳನ್ನು ಹೇಳುವ ಬಗ್ಗೆ ಗಮನ ಹರಿಸುವುದು ಆವಶ್ಯಕವಾಗಿದೆ. ಹಾಸ್ಯವಿನೋದದ ಕೂಟಗಳಿಂದಲೂ ಪರರನ್ನು ಪರಿಹಾಸ ಮಾಡುವ ಕೂಟಗಳಿಂದಲೂ ದೂರ ಸರಿಯುವುದು ಸಹ ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ದಾನಧರ್ಮಗಳಿಂದ ವಿಪತ್ತು ದೂರ ಸರಿದು ಹೋಗುತ್ತದೆ ಎಂದು ಎಲ್ಲ ಧರ್ಮಗಳು ಒಮ್ಮತ ಹೊಂದಿವೆ. ಒಂದು ವಿಪತ್ತು ಬಂದೆರಗುವ ಬಗ್ಗೆ ಅಲ್ಲಾಹನು ಮುಂಚಿತವಾಗಿ ತಿಳಿಸಿದರೆ ಅದನ್ನು **ವಈದ್** ಭವಿಷ್ಯವಾಣಿ ಎಂದು ಕರೆಯಲಾಗುತ್ತದೆ. ದಾನಧರ್ಮ ನೀಡುವ ಮೂಲಕ, ತೌಬ ಪ್ರಾರ್ಥನೆ ಮಾಡಿ ಅಲ್ಲಾಹನ ಕಡೆಗೆ ತಿರುಗುವ ಮೂಲಕ, ಇಂತಹ ಮುನ್ನೆಚ್ಚರಿಕೆಯ (ವಈದ್) ಭವಿಷ್ಯವಾಣಿ ಸಹ ದೂರ ಸರಿಯುತ್ತದೆ. ನಾನು ದಾನಧರ್ಮಗಳನ್ನು ಸ್ವೀಕರಿಸುತ್ತೇನೆ ಎಂದು ಅಲ್ಲಾಹನು ಹೇಳಿರುವಾಗ, ಅವನು ತನ್ನ ಪ್ರವಾದಿಗಳ ಮತ್ತು ಸಂದೇಶವಾಹಕರ ಮೂಲಕ ಮುನ್ನೆಚ್ಚರಿಕೆ ನೀಡಿದ ಭವಿಷ್ಯವಾಣಿಗಳನ್ನು ದೂರಸರಿಸಲು ಮಾಡಿದ ಪ್ರಾರ್ಥನೆಯನ್ನು ಸಹ ಅಂಗೀಕರಿಸುವ ಶಕ್ತಿಯನ್ನು ಹೊಂದಿದ್ದಾನೆ. ಅವುಗಳಲ್ಲಿ ವಿಪತ್ತು ಬಂದೆರಗುವ ಬಗ್ಗೆ ನೀಡಿದ ಮುನ್ನೆಚ್ಚರಿಕೆಗಳು ಸಹ ಸೇರುತ್ತವೆ. ಹಝ್ರತ್ ಯೂನುಸ್ ಅಲೈಹಿಸ್ಸಲಾಮರ ಜನಾಂಗಕ್ಕೆ ಸಂಬಂಧಿಸಿ ಇಂತಹ ಭವಿಷ್ಯವಾಣಿ ಮಾಡಲಾಗಿತ್ತು. ಆ ಜನಾಂಗ ಪ್ರಾರ್ಥನೆ, ದಾನಧರ್ಮ ಮತ್ತು ಅತ್ತುಗೋಳಾಡಿದ ಕಾರಣ ರಕ್ಷಿಸಲ್ಪಟ್ಟಿತು. ಆ ಜನಾಂಗದ ನಾಶದ ಬಗ್ಗೆ ಮಾಡಲಾದ ಭವಿಷ್ಯವಾಣಿ ನಿವಾರಿಸಲ್ಪಟ್ಟಿತು. ಆದುದರಿಂದ ಪ್ರವಾದಿಗಳು ಮುನ್ನೆಚ್ಚರಿಕೆ ನೀಡಿದ ವಿಪತ್ತುಗಳು ಸಹ ದಾನಧರ್ಮಗಳಿಂದ ದೂರ ಸರಿಯಲು ಸಾಧ್ಯವಿರುವಾಗ, ಮನುಷ್ಯನು ಮಾಡಿದ ಕೃತ್ಯಗಳ ಪರಿಣಾಮವಾಗಿ ಎದುರಿಸಬೇಕಾಗಿ ಬರುವ ವಿಪತ್ತುಗಳು, ಅಲ್ಲಾಹನನ್ನು ಮರೆತುಬಿಟ್ಟ ಕಾರಣದಿಂದ ಎದುರಿಸಬೇಕಾಗಿ ಬರುವ ವಿಪತ್ತುಗಳು ಇಸ್ತಿಗ್‌ಫಾರ್, ತೌಬ ಮತ್ತು ದಾನಧರ್ಮದಿಂದ ಏಕೆ ದೂರಸರಿಸಲ್ಪಡಲಾರವು. ಖಂಡಿತವಾಗಿಯೂ ಅವು ದೂರ ಸರಿಸಲ್ಪಡುವುವು. ಆದರೆ ಶರತ್ತೇನೆಂದರೆ ನಮ್ಮ ವಿಲಾಪ, ದುಆ ಮತ್ತು ದಾನಧರ್ಮ ಅಲ್ಲಾಹನ ಆಜ್ಞೆಗಳಿಗೆ ಅನುಸಾರವಾಗಿರಬೇಕು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೇಳಿದರು: ಸದಖ ಅಲ್ಲಾಹನ ಕೋಪವನ್ನು ತಣ್ಣಗಾಗಿಸುತ್ತದೆ. ಕೆಟ್ಟ ಮೃತ್ಯುವನ್ನು ದೂರ ಸರಿಸುತ್ತದೆ. ಆದುದರಿಂದ ನೀವು ದಾನಧರ್ಮ ನೀಡಿ ನರಕಾಗ್ನಿಯಿಂದ ರಕ್ಷಣೆ ಪಡೆಯಿರಿ– ಅರ್ಧ ಖರ್ಜೂರ ದಾನ ನೀಡಿಯಾದರೂ ಸರಿ.

ಈ ವಿಷಯಗಳನ್ನು ಯಾವಾಗಲೂ ನಮ್ಮ ಮುಂದೆ ಇರಿಸಿಕೊಳ್ಳಬೇಕು. ಹೃತ್ಪೂರ್ವಕವಾಗಿ ಮಾಡಿದ ಇಸ್ತಿಗ್‌ಫಾರ್, ಮುಂದೆ ಮಾಡಬಹುದಾದ ಪಾಪಗಳಿಂದ ರಕ್ಷಣೆ ನೀಡುತ್ತದೆ ಮತ್ತು ಅಲ್ಲಾಹನ ಕಾರುಣ್ಯವನ್ನು ಉತ್ತೇಜಿಸುತ್ತದೆ ಮತ್ತು ಅವನ ಸಾಮೀಪ್ಯ ದೊರಕುವಂತೆ ಮಾಡುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಸಂದರ್ಭದಲ್ಲಿ ಹೇಳಿದರು: ಅಲ್ಲಾಹನಿಂದ ಬೇಡಿಕೊಳ್ಳುವುದರಲ್ಲಿ ಎಲ್ಲದಕ್ಕಿಂತಲೂ ಅವನಿಗೆ ಪ್ರಿಯವಾದುದು ಅವನಿಂದ ಸ್ವಸ್ಥತೆಯನ್ನು ಬೇಡಿಕೊಳ್ಳುವುದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತೊಮ್ಮೆ ಹೇಳಿದರು: ಬಂದೆರಗಿದ ವಿಪತ್ತಿನ ಬಗ್ಗೆ ಮಾಡುವ ಪ್ರಾರ್ಥನೆಗಿಂತ ಬಂದೆರಗಬಹುದಾದ ವಿಪತ್ತಿನ ಬಗ್ಗೆ ಮಾಡುವ ದುಆ ಲಾಭಕರವಾಗುತ್ತದೆ. ಓ ಅಲ್ಲಾಹನ ದಾಸರೇ, ದುಆ ಮಾಡುವುದು ನಿಮಗೆ ಕಡ್ಡಾಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ ನಿರ್ಲಕ್ಷ್ಯದಿಂದ ಮಾಡುವ ಪಾಪ ನೀವು ಪಶ್ಚಾತ್ತಾಪಗೊಳ್ಳುವ ಪಾಪಕ್ಕಿಂತ ಘೋರವಾಗಿರುತ್ತದೆ. ಈ ಪಾಪ ವಿಷಮಯವೂ ಹಂತಕವೂ ಆಗಿರುತ್ತದೆ. ತೌಬ ಮಾಡುವವನು ಪಾಪವನ್ನು ಮಾಡದವನ ಹಾಗೆ ಆಗುತ್ತಾನೆ. ಎಂದರೆ ಸತ್ಯವಾಗಿ ತೌಬ ಮಾಡಿದವನು, ಇಸ್ತಿಗ್‌ಫಾರ್ ಮಾಡಿದವನು, ಹಿಂದೆ ಮಾಡಿದ ಪಾಪಗಳ ಬಗ್ಗೆ ಕ್ಷಮೆಯನ್ನು ಬೇಡಿಕೊಂಡವನು, ಮುಂದೆ ಪಾಪ ಮಾಡಲಾರೆನು ಎಂದು ಪ್ರತಿಜ್ಞೆ ಮಾಡಿದವನು, ಯಾವುದೇ ಪಾಪವನ್ನು ಮಾಡದವನ ಹಾಗೆ ಆಗುತ್ತಾನೆ.

ಅಲ್ಲಾಹನು ನಮಗೆ ಪ್ರಾರ್ಥನೆಯ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಳ್ಳುವ ಭಾಗ್ಯವನ್ನು ಕರುಣಿಸಲಿ. ನಾವು ನಿಷ್ಠಾವಂತರಾಗಿ ಅಲ್ಲಾಹನ ಮುಂದೆ ಬಾಗುವವರಾಗುವಂತೆ

ಮಾಡಲಿ. ನಾವು ಇಸ್ತಿಗ್‌ಫಾರ್ ಬಗ್ಗೆ ಗಮನ ಹರಿಸುವವರಾಗಲಿ. ನಮ್ಮ ಹಿಂದಿನ ಪಾಪಗಳ ಬಗ್ಗೆ ಅಲ್ಲಾಹನ ಮುಂದೆ ಬಾಗಿಕೊಂಡು ಕ್ಷಮೆ ಯಾಚಿಸುವವರಾಗಲಿ. ಮುಂದೆ ಪಾಪ ಮಾಡುವುದರಿಂದ ನಮ್ಮನ್ನು ರಕ್ಷಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿ ಅದರ ಬಗ್ಗೆ ಧಾರಾಳ ಪ್ರಯತ್ನ ಮಾಡುವವರಾಗೋಣ. ವಿಪತ್ತುಗಳನ್ನು ದೂರಸರಿಸಲು ಎಂತಹ ದಾನಧರ್ಮಗಳನ್ನು ಮಾಡಬೇಕೆಂದರೆ ಅವು ಅಲ್ಲಾಹನಿಂದ ಅಂಗೀಕರಿಸಲ್ಪಡುವವುಗಳಾಗಬೇಕು. ಅಲ್ಲಾಹನು ಯಾವಾಗಲೂ ನಮ್ಮನ್ನು ಅವನ ಆಶ್ರಯದಲ್ಲಿ ಇರಿಸುವವನಾಗಲಿ. ಶತ್ರುಗಳ ಮತ್ತು ವಿರೋಧಿಗಳ ಪ್ರತಿಯೊಂದು ಆಕ್ರಮಣದಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ. ಅವರ ಆಕ್ರಮಣಗಳನ್ನು ಅವರ ಕಡೆಗೇ ಮರಳುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನ ಬಗ್ಗೆ ಭಯವನ್ನು ಯಾವಾಗಲೂ ಹೃದಯದಲ್ಲಿ ಹೊಂದಿರುವ ದಾಸರಾಗಿ ನಾವು ಗಣಿಸಲ್ಪಡಲಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳಿಗೆ ನಾವು ವಾರೀಸುದಾರರಾಗುವಂತೆ ಅಲ್ಲಾಹನು ಮಾಡಲಿ ಮತ್ತು ಅವುಗಳಲ್ಲಿ ಭಾಗವಹಿಸುವವರಾಗುವಂತೆ ಮಾಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಹೇಳಿದರು) ನಮಾಝ್‌ಗಳ ನಂತರ ಒಂದು ಜನಾಝ ಗಾಯಿಬ್ ನಿರ್ವಹಿಸುವೆನು. ಮುಕರ್ರಮ ಸಅದ ಬರ್‌ತಾವಿ ಸಾಹಿಬ. ಸಿರಿಯಾ ದೇಶದ ಡಮಾಸ್ಕಸ್‌ನಲ್ಲಿ ಮೃತರಾದರು. ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.

—————*****—————


***Friday Sermon delivered by Hadrath Khaleefatul Masih Al Khamis***(atba)

*At, Masjid Baithul Futhuh, London on 24-02-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon